# ಮಾತು-ಕತೆ

● ನಿಮ್ಮ ಸಿನಿಮಾಗಳ ಕ್ಯಾನ್ವಾಸಿನ ಮೇಲೆ ಬಾಲ್ಯದ ಪ್ರಭಾವ ಯಾವ ಬಗೆಯದು?

ಈ ಮನುಷ್ಯ ಪ್ರಪಂಚದಲ್ಲಿ ಗಂಡುಹೆಣ್ಣು ಪ್ರಬೇಧ ಇದೆಯಲ್ಲ, ಅದರಲ್ಲಿ ನಾನೇನೂ ವಿಶೇಷ ಅಲ್ಲ. ನಾನು ಈ ಕ್ಷಣ ನಿಮ್ಮ ಮುಂದೆ ಕೂತು ಮಾತಾಡ್ತಿದ್ದೀನಲ್ಲಾ, ಈಗ ಏನೋ ಆಗಿರುವೆನಲ್ಲ – ಅದಕ್ಕೆ ನನ್ನ ಬದುಕಿನಲ್ಲಿ ಈ ಕ್ಷಣದವರೆಗೆ ನನ್ನನ್ನು ಯಾರ್ ಯಾರು ಭೇಟಿಯಾಗಿರುವರೋ ಅವರೆಲ್ಲರೂ ಕಾರಣ. ಸ್ಲಮ್... ಗೊಟ್ಟಿಗೆರೆ... ಕಾವೇರಿನಗರ... ಎಲ್ಲೋ ಯಾರದೋ ಸಾವಾಗತ್ತೆ. ಇಲ್ಲಿ ನಮಗೆ ಬಡತನ. ನಾನು ಡಾಲರ್ಸ್ ಕಾಲೊನಿಯವನಾ ಅಥವಾ ಕಾವೇರಿ ನಗರದವನಾ ಎಂದು ಇನ್ನಾವುದೋ ಸಂಗತಿ ಡಿಸೈಡ್ ಮಾಡುತ್ತದೆ. ಆ ಸಂಗತಿ ಯಾವುದು ಅಂತ ನನಗೊತ್ತಿಲ್ಲ.

ನಾನು ನಂಬರ್ ಒನ್ ಆಗಬೇಕು ಅಂತ ತುಂಬ ಚಿಕ್ಕವಯಸ್ಸಿನಿಂದಲೇ ಟ್ರೈ ಮಾಡ್ತೋನು. ಕ್ಲಾಸ್‌ರೂಮಲ್ಲಿ ಫಸ್ಟ್. ಟೀಚರ್ ನನ್ನನ್ನು 'ನೀ ಕ್ಲಾಸ್‌ರೂಮ್ ನೋಡ್ಕೊ' ಅಂತ ಬಿಟ್ಟು ಹೋಗೋರು. ಏರಿಯಾ... ಅಲ್ಲಿಯೂ ನಂಬರ್ ಒನ್. ಗಣೇಶನ ಹಬ್ಬದಲ್ಲೂ ಲೀಡರ್‌ಷಿಪ್ ಕ್ವಾಲಿಟಿ ಇತ್ತು. ಮನಿ ತರ್ಬೇಕು. ಅದು ಅನ್ಯಾಯದಿಂದ ಆಗಿರಬಾರದು. ಗಣೇಶನ ಕೂಡಿಸ್ಬೇಕು, ಗಣೇಶನ ವಾಪಸ್ ಬಿಡಬೇಕು ಅಂತ ಕೆಲಸ ಮಾಡ್ತಿದ್ದೆ. ಅದ್ಕೊಂದು ಪುಟ್ಟ ಸಂಘ ಇತ್ತು. ಅಲ್ಲಿ ನಮಗಿಂತ ದೊಡ್ಡವರೂ ಇದ್ರು. ಆದ್ರೆ ನನಗೆ ಚಿತ್ರಕಲೆ ಬೇಸ್ ಆಗಿತ್ತು. ಈ ಕಾರಣಕ್ಕೇ ನನ್ನನ್ನು ಕ್ರೈಂನವರೂ ಮುಟ್ತಾ ಇರ್ಲಿಲ್ಲ. ನಾನು ರೌಡಿಗಳ ಜತೆಗೇ ಇದ್ರೂ ಕೂಡ ಅವರು ನನ್ನನ್ನು ನೋಡುವ ದೃಷ್ಟಿ ಬೇರೆಯೇ ಆಗಿತ್ತು. ಅದು ನನಗೆ ಹೆಲ್ಪ್ ಆಯ್ತು.

ನನ್ನ ಇಡೀ ಜೀವನದಲ್ಲಿ 'ಸ್ಕೂಲಿಗೆ ಹೋಗು' ಅಂತ ನಂಗ್ಯಾರೂ ಹೇಳಿಲ್ಲ. ಮೂರನೇ ತರಗತಿ. ಆಗ ತಂದೆ ಹೋದರು. ನಂತ್ರ ನಂಗೆ ಸ್ಕೂಲಿಗೆ ಹೋಗು ಅಂತ ಹೇಳ್ದೋರು ಒಬ್ರೂ ಇಲ್ಲ. 'ಕೆಲಸ ಕಲಿ' ಅಂತ ಹೇಳೋರು. ನನಗೆ ದೊಡ್ಡೋರು ಅಂದ್ರೆ ಭಯ ಯಾಕಿತ್ತು ಅಂದ್ರೆ ಅವರೆಲ್ಲ ತಲೆಮೇಲೆ ಕೈಯಿಟ್ಟು ಹೇಳೋದು 'ಕೆಲ್ಸ ಕಲಿ' ಅಂತ. ಅದೂ ಕೈ ಕೆಲಸ ಕಲಿ ಅಂತ ಹೇಳೋರು. ಕೈ ಕೆಲಸ ಅಂದರೆ ಮೆಕ್ಯಾನಿಕ್, ಟೈಲರಿಂಗ್ ಎಲ್ಲವೂ ಬರ್ತದೆ. ಈ ಕೈ ಕೆಲಸಗಳೇ ನಮಗೆಲ್ಲ ಆಗ ಅನ್ನ ಹಾಕಿದ್ದು.

ನಾನು ನನಗೆ ಸುಲಭ ಅಂತ್ವೇಳಿ ಸೈನ್‌ಬೋರ್ಡ್ ಅಂಗಡಿ ಸೇರ್ಕೊಂಡೆ. ನನ್ನಣ್ಣ ಟೈಲರ್ ಅಂಗಡಿಗೆ ಹೋಗಿ ಕೆಲಸಕ್ಕೆ ಸೇರಿಕೊಂಡ. ಇವತ್ತಿಗೂ ಅವನೊಬ್ಬ ಟೈಲರ್ ಆಗಿಯೇ ಇದಾನೆ. ಸೈನ್ ಬೋರ್ಡ್ ಅಂಗಡಿಗೆ ಹೋಗುವ ಮೊದಲೇ ನನಗೆ ಚಿತ್ರ ಬರಿಯೋಕೆ ಬರ್ತಿತ್ತು. ಚಿತ್ರ ಬರೆಯೋದು ನಾನು ಕಲಿತಿದ್ದಲ್ಲ, ಅದು ಆಲ್‌ರೆಡಿ ಇತ್ತು. ಕೆಲವರಿಗೆ ಕಂಠ ಇರುತ್ತೆ. ಯಾರೋ 'ಏ, ನಿನ್ನ ಕಂಠ ಚೆನ್ನಾಗಿದೆ. ಒಂದಿಷ್ಟು ಸಂಗೀತ ಕಲಿ' ಎಂದು ಸಲಹೆ ಕೊಟ್ಟಾಗ ಸಂಗೀತ ಕಲಿಯೋಕೆ ಶುರುಮಾಡ್ತಾರಲ್ಲಾ, ಆ ರೀತಿ ನನ್ನ ಜೀವನ ಶುರುವಾಗಿದ್ದು ಸೈನ್‌ಬೋರ್ಡ್ ಅಂಗಡೀಲಿ. ಐದನೇ ಕ್ಲಾಸಿಗೆ ಸೇರಿಕೊಳ್ಳುವ ಹೊತ್ತಿಗಾಗಲೇ ನನಗೆ ಈ ಜೀವನಕ್ಕೆ ದುಡ್ಡು ಬೇಕು ಎಂಬುದು ಅರ್ಥ ಆಗೋಗಿತ್ತು. ನಾನು ತುಂಬ ಚಿಕ್ಕವಯಸ್ಸಿನಿಂದ ದೊಡ್ಡವರ ಜತೆ ಇದ್ದೂ ಇದ್ದೂ ವ್ಯವಹಾರಗಳನ್ನು ನೋಡ್ತೋನು.

● ನಿಮ್ಮಲ್ಲಿನ ಪ್ರತಿಭೆ ನಿಮಗೇ ತಿಳಿದಿದ್ದು ಯಾವಾಗ?

ಈಗ ಎರಡು ಥರದ ದ್ವಂದ್ವದಲ್ಲಿ ಇದ್ದೀವಿ ನಾವು. (ಹೀಗೆನ್ನುತ್ತಾ ಎದುರಿಗಿದ್ದ ಬಿಳೀ ಹಾಳೆಯ ನಟ್ಟ ನಡುವೆ ಸುಯ್ಯನೇ ಗೆರೆ ಎಳೆದರು ಸೂರಿ). ಒಂದು ನಮ್ಮ ರೂಟು. ಇನ್ನೊಂದು ಈಗ ಚಾಲ್ತಿಯಲ್ಲಿ ಇರುವ ರೂಟು. ನಾನು ಹೇಳ್ತೀನಿ ನನ್ ರೂಟು ಸರಿ ಅಂತ. ಆದರೆ ನನ್ನ